


ಎಡದಿಂದ ಬಲಕ್ಕೆ:

1. ಆ ದೇವತೆಯ ಸೌಂದರ್ಯಕ್ಕೆ ಸಮ ಮತ್ತೊಂದಿಲ್ಲ (4)
3. ಗಡಿಯಾರದ ಕೆಳಗೆ ವ್ಯಾಯಾಮ ಶಾಲೆ (3)
7. ಮುಂದಿನದೇನೇ ಇರಲಿ, ಮರ್ಯಾದೆಯನ್ನೇ ಐಶ್ವರ್ಯವನ್ನಾಗಿ ಹೊಂದಿರುವಾತ (4)
8. ಹೇಮಾಶ್ರಮದಲ್ಲಿ ಪೂಜೆಗೊಂಡವ 'ಮಹಾನ್ ದೇವರು' (3)
9. ಪೀಪಿಗಾಗಿ ಅತ್ತದ್ದು ಇದೇ 'ಮಗು' (3)
12. ಆಲಾಪನೆ ಬೇಡ ಎನ್ನಲೊಂದು ಕಾರಣ (2)
14. ಸಮಾನ ಆಶ್ರಯ ಕೋರಿದ್ದಕ್ಕೇ ಅನುಮಾನವೇ? (3)
15. ಸೇಡು ತೀರಿಸಲು ಬಂದವನಿಗೆ ಜಲಪಾತ ಕಾಣಿಸಿತೇ? (4)
17. ಅನ್ನವನ್ನು ನೀಡುತ್ತಿರುವುದೇ ಭೂಮಿ (3)
18. ಧನ್ಯನಾಗಲೆಂದು ನೀಡಿದ್ದು ದುಡ್ಡು–ಕಾಳು (4)

ಮೇಲಿಂದ ಕೆಳಕ್ಕೆ:

1. ಒಂದಡಿ ಉದ್ದ ಅವನ ಹೆಜ್ಜೆ (2)
2. ತಮ್ಮನದೇ ಆ ಕುರಿತ ಎಲ್ಲ ನಿರ್ಧಾರ (3)
4. ರಾಶಿ ವಿಷಯದಲ್ಲಿ ಸೂರ್ಯ–ಚಂದ್ರ ಜೋಡಿ (4)
5. ಸಿಹಿ ಪಾನೀಯ ಕಂಡದ್ದು ತಲೆ ಕೆಳಗು (3)
6. ಸಮಾನಾರ್ಥಕವನ್ನೇ ಬಳಸಿದ್ದರ ಪುಷ್ಟೀಕರಣ (4)
10. ಪಲ್ಯವನ್ನ ಕಂಡದ್ದೇ ತಡ, ಓಟ (4)
11. ಆಕೆಯ ಸ್ವಭಾವ ಬದಲಾಗುವ ಸಾಧ್ಯತೆಯೇ ಇಲ್ಲ (4)
13. ಪಥ್ಯವನ್ನ ಪಾಲಿಸದೆ ಈ ರೀತಿ ಸ್ಥಾನ ಚ್ಯುತಿ (3)
16. ಸಂಧಾನ ಯಶಸ್ವಿಗೊಳಿಸಿ ಪಡೆದ ಮನೆ ಇದು (3)
17. ಆನೆಯಲ್ಲಿ ಕಂಡ ಈ ಗುಣ ಅದರದ್ದಲ್ಲ (2)

## ಪದಬಂಧ: 15-7-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಸಮ್ಮತ; 3. ಅಧೀನ; 4. ವರಾತ; 6. ತಿರಸ್ಕಾರ; 7. ಹಾವುಗೆ; 9. ಬಾಲಿಕೆ; 11. ಕರಿಯ; 13. ಸುಹಾಸ; 15. ಭೀಮಬಲ; 17. ಪುಳಕ; 18. ಲಾಲಸೆ; 19. ರಕ್ಷಾಪುಟ.

ಮೇಲಿಂದ ಕೆಳಕ್ಕೆ:

1. ಅನತಿ; 2. ತವರ; 3. ಅರಿವು; 5. ತಬ್ಬಲಿ; 7. ಹಾರ್ದಿಕ; 8. ಗೆಳೆಯ; 9. ಬಾರಿಸು; 10. ಕೆಲಸ; 12. ರಿಕಾಪು; 14. ಹಾವಸೆ; 15. ಭೀಕರ; 16. ಲಲಾಟ.


# ಪ್ರದೇಶ ವಿಶೇಷ

## 'ಕಲಹಾರಿ'–ಅದೇನು?

'ಕಲಹಾರಿ' ಅದೊಂದು ಮರುಭೂಮಿ. ಮರುಭೂಮಿ ಎಂದರೆ 'ಮರಳು ಗಾಡು' ಎಂಬ ಬಹುಜನರ ಕಲ್ಪನೆಗೆ ಸಂಪೂರ್ಣ ಒಪ್ಪವಾಗುವ ವಿಶಿಷ್ಟ ಬಿಸಿ ಮರುಭೂಮಿ ಅದು.

ಆಫ್ರಿಕಾ ಖಂಡದಲ್ಲಿರುವ ಕಲಹಾರಿ ಮರುಭೂಮಿಯದು ಏಳು ಲಕ್ಷ ಹನ್ನೆರಡು ಸಾವಿರದ ಇನ್ನೂರೈವತ್ತು ಚದರ ಕಿ.ಮೀ. ವಿಸ್ತಾರ (ಚಿತ್ರದಲ್ಲಿ ಬಾಣದ ಗುರುತು ಕಲಹಾರಿ ಮರುಭೂಮಿಯನ್ನು ಸೂಚಿಸುತ್ತಿದೆ.) ಬೇರೆ ಎಲ್ಲ ಮರುಭೂಮಿಗಳಿಗೆ ವಿರುದ್ಧವಾಗಿ ಕಲಹಾರಿಯಲ್ಲಿ ಎಲ್ಲೂ ಕಲ್ಲು–ಗುಂಡು ತುಂಬಿಲ್ಲ; ಬಕ್ಕ ಬಂಡೆಗಳ ಗುಡ್ಡ–ಬೆಟ್ಟಗಳಿಲ್ಲ; ಬಿಸಿಲು–ಚಳಿ, ಮರಳು ತುಂಬಿದ ಗಾಳಿ– ಇವುಗಳಿಂದ ಶಿಥಿಲೀಕರಣಗೊಂಡು ಅನೂಹ್ಯ ರೂಪಗಳನ್ನು ತಳೆದು ನಿಂತಿರುವ ಬಂಡೆ ಶಿಲ್ಪಗಳಿಲ್ಲ. ಕಲಹಾರಿಯಲ್ಲಿ ಎಲ್ಲೆಲ್ಲೂ ಬರೀ ಮರಳು. ಅನಂತವ್ವೋ ಎನಿಸುವಂತೆ ಹೀಗೆ ಮರಳು ಹರಡಿರುವ ಕಲಹಾರಿ ಸಹಜವಾಗಿಯೇ ಧರೆಯ ಅತಿ ವಿಸ್ತಾರ ಮರಳಿನಾವಾರ ಎಂಬ ದಾಖಲೆ ಸ್ಥಾಪಿಸಿದೆ.

ಕಲಹಾರಿ ಮರಳುಗಾಡು ಮೈದಳೆದ ಪರಿಯೂ ತುಂಬ ವಿಸ್ಮಯಕರ. ಈಗ ಈ ಮರುಭೂಮಿ ಇರುವ ಪ್ರದೇಶ ಈಗ್ಗೆ ಆರೂವರೆ ಕೋಟಿ ವರ್ಷ ಹಿಂದೆ ಜ್ವಾಲಾಮುಖಿಗಳಿಂದ ತುಂಬಿಹೋಗಿತ್ತು. ಅವೆಲ್ಲ ಅಗ್ನಿಪರ್ವತಗಳಿಂದ ಉಕ್ಕಿ



ಉಕ್ಕಿ ಹರಿದ ಲಾವಾರಸದ ಮಹಾಪೂರ ನಿಧಾನವಾಗಿ ತಣಿದಾಗ ಆ ಇಡೀ ಪ್ರದೇಶ ಗುಡ್ಡ ಬೆಟ್ಟ ಕಣಿವೆ ಕಂದರಗಳಿಂದ ಕಿಕ್ಕಿರಿದ ಬರೀ ಬಂಡೆಹಾಸುಗಳ, ಭಾರೀ ಏಳುಬೀಳುಗಸಳ ನೆಲವಾಗಿತ್ತು. ಅಲ್ಲಿಂದ ಮುಂದೆ ಸುಮಾರು ಐದು ಕೋಟಿ ವರ್ಷಕಾಲ ಅದೇ ಪ್ರದೇಶ ಗಾಳಿ–ಮಳೆಗಳಿಗೆ ತೆರೆದುಕೊಂಡಿತ್ತು. ಆ ಶಿಥಿಲಕಾರಕಗಳ ದಾಳಿಯಿಂದ ಬೆಟ್ಟ ಗುಡ್ಡಗಳೆಲ್ಲ ಸವೆದು, ಕಣಿವೆ ಕಂದರಗಳೆಲ್ಲ ಜೇಡಿಮಣ್ಣು– ನುರುಜು ರಾಶಿಗಳಿಂದ ತುಂಬಿ ವಿಶಾಲ ಬಯಲೊಂದು ಮೈದಳೆಯಿತು ಆ ವೇಳೆಗೆ ಆ ಪ್ರದೇಶದಲ್ಲಿ ಮಳೆ ಪ್ರಮಾಣವೂ ತುಂಬ ಕಡಿಮೆಯಾಗಿ ಪ್ರಬಲ ಗಾಳಿ ಮಾತ್ರ ಅವಿರತ ಬೀಸುತ್ತಿತ್ತು. ಹಾಗೆ ಬೀಸುತ್ತಿದ್ದ ಗಾಳಿ ಸನಿಹದ ಕಡಲ ತಡಿಯ ಮರಳನ್ನು ತಂದು ತಂದು, ಹರಡಿ ಹರಡಿ ಬರೀ ಮರಳು ತುಂಬಿದ ಮರುಭೂಮಿ ಮೈದಳೆಯಿತು. ಅದೇ 'ಕಲಹಾರಿ.'

ಹೀಗೆ ಬರೀ ಮರಳಿನ, ತುಂಬ ಕಡಿಮೆ ಮಳೆಯ ಕಲಹಾರಿಯಲ್ಲಿ ಸಸ್ಯಾಚ್ಛಾದನೆಯೂ ವಿರಳ; 'ಕೇವಲ ಕುರುಚಲು ಗಿಡಗಳು, ಮುಳ್ಳು ಪೊದೆಗಳು ಮತ್ತು ಅಕೇಶಿಯಾ ವೃಕ್ಷಗಳು.' ಹಾಗಿದ್ದೂ ಕಲಹಾರಿಯಲ್ಲಿ ಪ್ರಾಣಿಗಳು ಬೇಕಾದಷ್ಟಿವೆ: 'ಸ್ಪ್ರಿಂಗ್ ಬಾಕ್, ಜಮ್ಸ್ ಬಾಕ್ ಮತ್ತು ವೈಲ್ಡ್ ಬೀಸ್ಟ್‌ಗಳ ಭಾರೀ ಹಿಂಡುಗಳು ಮತ್ತು ರಾಶಿ ರಾಶಿ ಮೀರ್ ಕ್ಯಾಟ್‌ಗಳು.' ಅವೆಲ್ಲಕ್ಕೂ ಮಿಗಿಲಾಗಿ ಇಪ್ಪತ್ತೈದು ಸಾವಿರ ವರ್ಷ ಹಿಂದಿನಿಂದಲೂ ಕಿಂಚಿತ್ತೂ ಬದಲಾಗಿಲ್ಲದ 'ಬುಶ್ ಮೆನ್'ಗಳೆಂಬ ಕಾಡು ಮನುಷ್ಯರು ಅಲ್ಲಿದ್ದಾರೆ. ಅವರ ಅಸ್ತಿತ್ವ ಕಲಹಾರಿಯ ಒಂದು ಪರಮ ವೈಶಿಷ್ಟ್ಯ.

■ ಎನ್. ವಾಸುದೇವ್